ಬಂದು, ಹಗ್ಗಕ್ಕೆ ಕೊರಳೊಡ್ಡುವ ಮನಸ್ಸುಗಳ ನಡುವೆ ಇವರು ನಮ್ಮಂಥವರಿಗೆ ಬದುಕಿನ ಪಾಠ ಕಲಿಸಿಕೊಡುವ ಗುರು ಮಾತೆಯಾರಾಗಿರುತ್ತಾರೆ.

ಇದಾದ ಒಂದು ವಾರಕ್ಕೆ ಒಂದು ದಿನ ಕೆಂಚಕ್ಕ ಕೆಲಸದಿಂದ ಸ್ವಲ್ಪ ತಡವಾಗಿ ಬಂದಿದ್ದಾಳೆ ಅನ್ನಿಸುತ್ತದೆ. ಸಾಯಂಕಾಲ ಆರು ಗಂಟೆ ಆಗಿತ್ತು. ಆಗ ಜೋಳ ಬೀಸುತ್ತಿದ್ದಳು. ಅವಳ ಆರೋಗ್ಯದ ಗುಟ್ಟು ಇಲ್ಲಿದೆ ಎನ್ನಿಸಿತು. ನಾವು ಅನ್ನ ತಿಂದು ಅನ್ನದ ಥರ ಇದೀವಿ. ಅವಳು ಜೋಳ ತಿಂದು ಜಟ್ಟಿ ಆಗಿದ್ದಾಳೆ.

ಅವಳು ಮಾತನಾಡಿಸಿಯೇ ಬಿಟ್ಟಳು. 'ಯಾಕವ್ವಾ ಏಟೊತ್ತಾತ್ತು. ಇಲ್ಲಿ ಬಂದು ಏನು ವಿಚಾರ ಮಾಡಕತ್ತಿರಿ? ಟೈಮೂ ಆಗೇದಾ ಕತ್ತಲಾಗುತ್ತಿದೆ. ನಿಮ್ಮ ಓಣಿಗೆ ಹೋಗಿರಿ. ಯಾರಾರಾ ನೋಡಿದ್ರೆ ಸುಮ್ಮನೆ ನೀವು ಬೈಯ್ಸಿಕೋತಿರಿ ಕಣವ್ವ' ಎಂದಳು.

ನನಗಂತೂ ಇದೆಲ್ಲ ಕೇಳಿ ಸಾಕಾಗಿತ್ತು. 'ಒಳ್ಳೇದೇ ಆಯಿತು ಬಿಡು ಕೆಂಚಕ್ಕ. ನಿಮ್ಮ ಮನೇಲಿ ಇದ್ದು ಬಿಡ್ತೀನಿ' ಎಂದೆ. 'ಬಿಡ್ತು ನನ್ನವ್ವ.. ಎಲ್ಲಾದ್ರೂ ಉಂಟೇ' ಎಂದಳು.

'ಸ್ವರ್ಗನರಕ, ಪಾಪಪುಣ್ಯ ಎನ್ನುವ ಹುಸಿ ಕ್ಷೇತ್ರಗಳು ನಿಜಕ್ಕೂ ಇವೆಯಾ. ಇದ್ದರೆ, ಸ್ವಿಸ್ ಬ್ಯಾಂಕ್‌ನಲ್ಲಿ ಹಣ ಇಟ್ಟಿರುವವರು ಸ್ವರ್ಗಕ್ಕೆ ಹೋಗುವರೋ ಅಥವಾ ಅವತ್ತೇ ದುಡಿದು ಅವತ್ತೇ ತಿನ್ನುವವರು ನರಕಕ್ಕೆ ಹೋಗುವರೋ' ಎಂದು ಯೋಚಿಸಿದೆ. ಈ ಮಾತು ಇವತ್ತಿನದಲ್ಲ, ನಿನ್ನೆಯದು ಕಾಲ-ಕಾಲದ್ದು. ಇದಕ್ಕೆ ಪರಿಹಾರ ನಾವೇ ಕಂಡುಕೊಳ್ಳಬೇಕು ಎಂದು ಸುಮ್ಮನಾದೆ.

ಮಾರನೇಯ ದಿನ ಸೇವಂತಿಯಕ್ಕ ಬೆಳಗ್ಗೆಯಿಂದ ಕಾಣಿಸುತ್ತಾ ಇರಲಿಲ್ಲ. ನಾನು ಗಮನಿಸಿದೆ ಎಲ್ಲೂ ಕಾಣಲಿಲ್ಲ. ಹೀಗೆ ಎರಡು ದಿನ ಕಳೆದೆ. ಸೇವಂತಿಯ ಸುಳಿವು ಸಿಗಲಿಲ್ಲ ಮನದಲ್ಲಿ ಕಸಿವಿಸಿ. ಕೇರಿ ಬಿಟ್ಟಳಾ ಹೇಗೆ? ಈ ಊರಿನವಳಲ್ಲ, ಈ ಕೇರಿಯವಳು ಅವಳಲ್ಲ. ಆದರೂ ಆರು ವರ್ಷದಿಂದ ಇಲ್ಲೇ ಇದ್ದವಳು ಅಥವಾ ವಯಸ್ಸಾಗಿದೆ ಅನ್ನೋ ಕಾರಣಕ್ಕೆ ಪಗಾರ ಕೇಳಿದರೆ ಕೇರಿಯಿಂದ ಆಚೆ ಹಾಕುತ್ತೀವಿ ಅಂದಿರಬಹುದಾ? ನನ್ನಲ್ಲಿ ನೂರಾರು ಪ್ರಶ್ನೆಗಳು ಹುಟ್ಟಿಕೊಂಡವು. ಯಾವುದಕ್ಕೂ ಕೆಂಚಕ್ಕನನ್ನು ಕೇಳಬೇಕು ಅಂತ ಸುಮ್ಮನಾದೆ. ಸಾಯಂಕಾಲದ ಸಮಯ. ಹೇಗೂ ಕೆಂಚಕ್ಕ ಮನೆಯಲ್ಲೇ ಇರುವಳು ಎಂದು ಅವರ ಮನೆ ಕಡೆ ಹೊರಟೆ. ಕೆಂಚಕ್ಕ ಮನೆಯಲ್ಲಿ ಇದ್ದಳು. ನನ್ನ ಊಹೆ ನಿಜವಾಗಿತ್ತು.

'ಸೇವಂತಿಯಕ್ಕ ಎರಡು ಮೂರು ದಿನದಿಂದ ಕಾಣ್ತಾ ಇಲ್ಲವಲ್ಲಾ' ಎಂದೆ.

'ಅವಳದೊಂದು ದೊಡ್ಡಕಥೆ ಕಣವ್ವ. ಹೇಳಿದರೆ ಒಂದು ದಿನ ಬೇಕಾಗುತ್ತೆ. ಪಾಪ, ಹೆಣ್ಣುಜೀವ ಹಾಗೆ ತಡಕೊಂಡು ಹೊಂಟಿದ್ದಾಳೆ' ಎಂದಳು.

'ಕೆಂಚಕ್ಕ ನೀನು ಹೇಳುವುದು ನೋಡಿದರೆ ನನಗೇಕೋ ಅಕ್ಕನ ಬದುಕಿನಲ್ಲಿ ಸಮಸ್ಯೆ ಎದುರಾಗಿದೆ ಎನ್ನಿಸುತ್ತದೆ. ದಯವಿಟ್ಟು ಹೇಳು. ಪರಿಹಾರ ಕಂಡು ಹಿಡಿಯುವತ್ತ ಪ್ರಯತ್ನ ಪಡೋಣ ಇಬ್ಬರು ಸೇರಿ' ಎಂದೆ.

'ಬೇಡ ಬಿಡವ್ವ. ನಮ್ಮ ಗೋಳು ಇದ್ದಿದ್ದೇ. ನಮ್ಮ ಹಣೆಬರಹವೇ ಇಷ್ಟು, ನೀನಿನ್ನೂ ಬೆಳೆಯ ಬೇಕಾದವಳು. ನಮ್ಮ ಗೋಳಿನ ಕಥೆ ಕೇಳಿ ಜೀವನದ ಮೇಲೆ ಜುಗುಪ್ಸೆ ಬಂದೀತು. ಇಂಥದ್ದೆಲ್ಲಾ ಕೇಳಿ ಏನು ಮಾಡ್ತೀ. ಸಣ್ಣ ಮಗು ನೀನು. ನಿನಗೆಲ್ಲಾ ಅರ್ಥ ಆಗಲ್ಲ ಬಿಡು' ಎಂದಳು.

'ಅಕ್ಕ... ನಾನು ಯಾವತ್ತಾದ್ರೂ ನಿಮ್ಮನ್ನು ಬಿಟ್ಟು ಕೊಟ್ಟಿದ್ದೀನಾ. ಏನಾದರೂ ಬಿಟ್ಟು ತಿಂದಿದ್ದೀನಾ ಹೇಳು. ನೀನು ನಮ್ಮನೆ ದ್ಯಾವ್ರು ಹಟ್ಟಿ ಲಕ್ಕವ್ವ ಇದ್ದಂಗೆ ಕಣವ್ವ. ನಿನಗೆ ಅಂತ ನೀನು ಏನು ತೆಗೆದುಕೊಳ್ಳಲ್ಲ. ಯಾವಾಗಲೂ ನಮ್ಮ ಕಷ್ಟದಾಗೆ ಪಾಲು ತಗೋತಿ ಹಂಗೆ ಸುಖಾನು ಕೊಡುತ್ತೀ'ಎಂದೆ.

'ಬಿಡ್ತು ನನ್ನವ್ವ. ನೀನು ನನ್ನ ಮಾತಲ್ಲೇ ಕಟ್ಟಿ ಹಾಕುವೆ. ಅದಕ್ಕೆ ಸುಮ್ಮನೆ ಹೇಳೋದೆ ವಾಸಿ. ಆದರೆ ಈ ಸುದ್ದಿ ಕೇರಿಯಾಗಿನ ಯಾರ ಕಿವಿಗಾದ್ರು ಬಿದ್ದರೆ, ಕೇರಿ ತುಂಬಾ ಹಬ್ಬಿ ನನ್ನ ಮತ್ತು ಸೇವಂತಿಯಕ್ಕನನ್ನು ಕೇರಿ ಬಿಟ್ಟು ಓಡಿಸುವರು, ಬಹಿಷ್ಕಾರ ಹಾಕುವರು. ಅದಕ್ಕೆ ಬಾಗಿಲು ಹಾಕ್ತೀನಿ ತಾಳು' ಎಂದಳು. ಸುತ್ತ ಮುತ್ತಾ ನೋಡಿ ಬಾಗಿಲು ಹಾಕಿ, ಒಳ ಬಂದಳು.

ಸೇವಂತಿ ಬಾಗಲಕೋಟೆ ಬಳಿಯ ಆಲಮಟ್ಟಿಯವಳು. ತಾಯಿಯ ಮಡಿಲಲ್ಲಿ ಅರಳಿದ ಮಲ್ಲಿಗೆಯಂತವಳು. ತಂದೆ ಊರಿನ ಗೌಡ ಎಂದು ಗೊತ್ತಿದ್ರೂ ಎಲ್ಲಿಯೂ ಅವಳು ಧೈರ್ಯವಾಗಿ ಅಪ್ಪನ ಹೆಸರು ಹೇಳುವಂತಿರಲಿಲ್ಲ. ಶಾಲೆಯಲ್ಲೂ ಕೂಡಾ